ಈ) ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮವು ಸ್ಥಾಪನೆ ಮಾಡಿದಾಗಿನಿಂದ ಇದುವರೆವಿಗೆ ಮಾಡಿರುವ ವೆಚ್ಚವೆಷ್ಟು ?

ಉ) ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದಿಂದ ಮೀನುಗಾರರಿಗೆ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ?

ಊ) ನಿಗಮದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು

ಆ) 224

(ಇವರಲ್ಲಿ 128 ನೌಕರರು ಮೀನುಗಾರಿಕೆ ಇಲಾಖೆಯಿಂದ ನಿಯೋಜನೆಯ ಮೇಲೆ ಕೆಲಸ ನಿರ್ವಹಿಸುತ್ತಿರುತ್ತಾರೆ)

1.2.86 ರಿಂದ 121

1.2.87 ರಿಂದ 29

1.2.88 ರಿಂದ 42

1.2.89 ರಿಂದ 11

1.2.90 ರಿಂದ 21

ಒಟ್ಟು 224

ಇ) ಸುಮಾರು 1400

ಈ) ನಿಗಮವನ್ನು ಸ್ಥಾಪನೆ ಮಾಡಿದಾಗಿನಿಂದ ಜನವರಿ 1991 ರ ಕೊನೆಯವರೆಗೆ 338.81 ಲಕ್ಷ ರೂ.ಗಳು ಖರ್ಚಾಗಿವೆ.

ಉ) ಉತ್ತಮ ತಳಿಯ ಮೀನುಮರಿ ಉತ್ಪಾದನೆಯನ್ನು ಹೆಚ್ಚು ಹೆಚ್ಚು ಮಾಡುವುದು, ಅವುಗಳನ್ನು ಮೀನುಮರಿ ಉತ್ಪಾದನಾ ಸಾಕಾಣಿಕೆ ಕೇಂದ್ರಗಳಲ್ಲಿ ಬೆಳಸಿ ಯೋಗ್ಯ ದರದಲ್ಲಿ ವಿತರಣೆ ಮಾಡುವುದು.

ಊ) ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದ ನೌಕರರು ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದು, ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಂಡಿರುವುದಿಲ್ಲ. ಆದುದರಿಂದ ಪ್ರಸ್ತುತ ಪರ್ಯಾಯ ನೌಕರಿಯನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ಇಳಿಸುವ ಬಗ್ಗೆ.

599 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸಲು ಸರ್ಕಾರದವರ ಮುಂದೆ ಸಲಹೆ ಏನಾದರೂ ಇದೆಯೇ ?

ಆ) ನಿವೃತ್ತಿ ವಯಸ್ಸನ್ನು ಕಡಿಮೆ ಮಾಡುವುದರಿಂದ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಿದಂತೆ ಆಗುವುದಿಲ್ಲವೆ ?

ಇ) ಹಾಗಿದ್ದಲ್ಲಿ, ನಿವೃತ್ತಿ ವಯಸ್ಸನ್ನು ಯಾವಾಗ ಕಡಿಮೆ ಮಾಡಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು):

ಅ) ಮತ್ತು ಇ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸುವ ಬಗ್ಗೆ ಈ ಹಿಂದೆ ಸದನದಲ್ಲಿ ಪ್ರಸ್ತಾಪಿಸಲಾಗಿತ್ತು. ಈ ಬಗ್ಗೆ 31-3-91ರ ನಂತರವೇ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ.

ರಾಜ್ಯ ಸರ್ಕಾರದ ಭ್ರಷ್ಟಾಚಾರಗಳ ಬಗ್ಗೆ.

601 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಲ್ಲಿರುವ ಭ್ರಷ್ಟಾಚಾರಗಳನ್ನು ತಡೆಗಟ್ಟಲು ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಪ್ರಕಾರ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಸಂಸ್ಥೆಗಳನ್ನು ರಾಜ್ಯದ ಉಡಳಿತದಲ್ಲಿ ಲಂಚಗುಳಿತನ ಮತ್ತು ಭ್ರಷ್ಟಾಚಾರಗಳನ್ನು ನಿಯಂತ್ರಿಸಲು ಮತ್ತು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ವಿಧಾನ ಮಂಡಲಗಳ ವಿಧೇಯಕದ ಮೂಲಕ ಸೃಷ್ಟಿಸಲಾಗಿದೆ.

ಕರ್ನಾಟಕ ವಿಧಾನಸೌಧ ನೌಕರ ಸಚಿವಾಲಯದ ಸತ್ಕಾರ ಸಮಾರಂಭದ ಬಗ್ಗೆ

629 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಪ್ರತಿ ವರ್ಷ ಗಣರಾಜ್ಯ ದಿನಾಚರಣೆಯ ಪ್ರಯುಕ್ತ ಸಚಿವಾಲಯದ ನೌಕರರಿಗೆ ಹಾಗೂ ಅವರ ಹೆಂಡತಿ ಮಕ್ಕಳಿಗೆ ಕಾಫಿ ತಿಂಡಿಯೊಂದಿಗೆ ಸತ್ಕರಿಸುವುದು ನಿಜವೇ?

ಆ) ಹಾಗಿದ್ದಲ್ಲಿ, ಅದರ ಉದ್ದೇಶವೇನು?

ಇ) ಈ ಸತ್ಕಾರ ಕೂಟದಲ್ಲಿ ಎಷ್ಟು ಜನ ಭಾಗವಹಿಸುತ್ತಾರೆ ಹಾಗೂ ಇದಕ್ಕೆ ತಗಲುವ ವೆಚ್ಚವೆಷ್ಟು ಮತ್ತು ಈ ವೆಚ್ಚಕ್ಕೆ ಸಮರ್ಥನೆ ಯಾವುದು?

ಈ) ಈ ಸತ್ಕಾರ ಸಮಾರಂಭಕ್ಕೆ ಮಿತವ್ಯಯದ ಆದೇಶ ಅನ್ವಯಿಸುವುದಿಲ್ಲವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು. ಪತಿ ಪತ್ನಿಯರನ್ನು ಮಾತ್ರ ಈ ಸಂತೋಷಕೂಟಕ್ಕೆ ಆಹ್ವಾನಿಸಲಾಗಿದೆ.

ಆ) ಸರ್ಕಾರ ನೌಕರರೊಳಗೆ ಸೌಹಾರ್ದತೆಯನ್ನು ಮತ್ತು ಒಳ್ಳೆಯ ಬಾಂಧವ್ಯವನ್ನು ವೃದ್ಧಿಸುವ ದೃಷ್ಟಿಯಿಂದ.

ಇ) ಇದರಲ್ಲಿ ಸುಮಾರು 3000 ಜನರು ಭಾಗವಹಿಸುತ್ತಾರೆ. ಇದಕ್ಕೆ ತಗಲುವ ವೆಚ್ಚ ರೂ. 37,800-00. ಸಮರ್ಥನೆಯನ್ನು (ಅ)ದಲ್ಲಿ ತಿಳಿಸಲಾಗಿದೆ.

ಈ) ಇಲ್ಲ.

ಸಿಲ್ಕ್ ಫಿಲೇಚರ್‌ಗಳ ಬಗ್ಗೆ

611 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಿಲ್ಕ್ ಫಿಲೇಚರ್ ಕೇಂದ್ರಗಳೆಷ್ಟು?

ಆ) ಇವುಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಅನೇಕ ಸಿಲ್ಕ್ ಫಿಲೇಚರ್‌ಗಳು ನಷ್ಟ ಅನುಭವಿಸುತ್ತಿರಲು ಕಾರಣವೇನು?